ISSN : 3048-7137

# ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind)
ಮತ್ತು ದಟ್ಟೋದು (Peer Review)
ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ
ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly
Research Journal
Volume-2, Number-3, July-September 2025
https://aray.in/

ಪುಟ/Pages : 130
ಹಕ್ಕು/@: ಪ್ರಕಾಶಕರು
ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು
**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೦೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | **4-25** |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | **26-49** |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | **50-67** |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | **68-78** |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | **79-87** |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | **88-99** |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | **100-117** |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | **118-130** |

ISSN : 3048-7137

# ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ

ನಟರಾಜ ಬಿ.ಎನ್.

**ಸೂಚಕ ಪದಗಳು**

ಕೇಳಿಕೆ, ಬಯಲಾಟ, ಜನಪದ ರಂಗಪ್ರಕಾರ, ಕೋಲಾರ,
ಜನಪದ ಸಂಸ್ಕೃತಿ.

**ಸಾರಲೇಖ**: ಕೋಲಾರ ಜಿಲ್ಲೆಯ ಬಯಲಾಟ ಪರಂಪರೆಯಲ್ಲಿ ಕೇಳಿಕೆ ಒಂದು ವಿಶಿಷ್ಟ ಜನಪದ ರಂಗಪ್ರಕಾರವಾಗಿ ಗುರುತಿಸಿಕೊಂಡಿದೆ. ಆಂಧ್ರಪ್ರದೇಶದ ಕುಪ್ಪಂ ಭಾಗದಿಂದ ಪ್ರಾರಂಭಗೊಂಡ ಈ ಕಲೆಯು ಕೋಲಾರ ಜಿಲ್ಲೆಯ ಗಡಿಭಾಗಗಳಲ್ಲಿ ಜನಪರಂಪರೆಯ ಒಂದು ಜೀವಂತ ಅಂಶವಾಗಿ ಬೆಳೆಯಿತು. ಕೇಳಿಕೆ ಪದವು ಕೇಳಿಸಿಕೊಳ್ಳುವುದು, ಹೇಳಿಸಿಕೊಳ್ಳುವುದು ಎಂಬ ಅರ್ಥದಲ್ಲಿ ರೂಪಗೊಂಡು ನೃತ್ಯ, ಸಂಗೀತ, ಅಭಿನಯ, ಕಥನಗಳ ಸಂಯೋಜಿತ ಕಲೆಯಾಗಿದೆ. ವಚನ ಸಾಹಿತ್ಯ, ಹರಿಹರನ ರಗಳೆ, ತೆಲುಗಿನ ಬಸವಪುರಾಣ, ಕನಕದಾಸರ ಕೀರ್ತನೆ ಗಳಲ್ಲಿ ಕೇಳಿಕೆಯ ಉಲ್ಲೇಖಗಳು ದೊರೆಯುತ್ತವೆ. ಈ ಕಲೆಯಲ್ಲಿ ಪೌರಾಣಿಕ ಹಾಗೂ ದೇಶೀ ಕಥೆಗಳು–ಬಾಲನಾಗಮ್ಮ, ದೇಶಿಂಗರಾಜು ಕಥೆ, ಸಾಸುಲು ಚಿನ್ನಮ್ಮ, ಮುಗ್ಗುರು ಮರಾಠಿಲು ಮುಂತಾದವುಗಳು– ಜನಪದ ನೈತಿಕತೆ, ಸ್ನೇಹ, ತಾಯ್ತನ, ಶೌರ್ಯ, ಧರ್ಮ ಮತ್ತು ಮಾನವೀಯ ಮೌಲ್ಯಗಳ ಪ್ರಸಾರಕರಾಗಿವೆ. ಕೇಳಿಕೆ ಕಲೆಯು ವಾದ್ಯ, ವೇಷಭೂಷಣ, ರಂಗವಿನ್ಯಾಸ, ಪಾತ್ರಾಭಿನಯಗಳ ಮೂಲಕ ಗ್ರಾಮೀಣ ಸಮಾಜದ ನೈತಿಕ ಹಾಗೂ ಸಾಂಸ್ಕೃತಿಕ ಜೀವನವನ್ನು

ಶ್ರೀಮಂತಗೊಳಿಸಿದೆ. ಇಂದಿನ ಜಾಗತೀಕರಣ ಮತ್ತು ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಈ ಜನಪದ ರಂಗಪ್ರಕಾರ ನಾಶದ ಅಂಚಿನಲ್ಲಿದ್ದರೂ, ಅದು ಜನಪದ ಸಂಸ್ಕೃತಿಯ ಅಮೂಲ್ಯ ಪಾರಂಪರ್ಯವೆಂಬ ಸ್ಥಾನವನ್ನು ಉಳಿಸಿಕೊಂಡಿದೆ.

ಕೋಲಾರ ಜಿಲ್ಲೆಯಲ್ಲಿ ಬಯಲಾಟದ ಪ್ರಕಾರಗಳಾದ ಯಕ್ಷಗಾನ, ಸಣ್ಣಾಟ, ದೊಡ್ಡಾಟ, ಗೊಂಬೆಯಾಟ, ತೊಗಲು ಗೊಂಬೆಯಾಟ – ಹೀಗೆ ಹಲವು ರಂಗ ಪ್ರಕಾರಗಳು ಪ್ರಸಿದ್ಧಿಗೊಂಡಿವೆ. ಇವುಗಳಲ್ಲಿ 'ಕೇಳಿಕೆ' ಎಂಬಬಯಲಾಟದ ರಂಗಪ್ರಕಾರ ತುಂಬಾ ಮಹತ್ವ ಪಡೆದಿದೆ. ಈ ಜಿಲ್ಲೆಯ ಬಯಲಾಟದ ಸಾಂಸ್ಕೃತಿಕ ಸಂಪತ್ತಿನ ಭಾಗವಾಗಿ ಕೇಳಿಕೆ ಕಲೆಯೂ ಒಂದು ರಂಗವಿನ್ಯಾಸವಾಗಿ ರೂಪುಗೊಂಡಿದೆ.' ಕೇಳಿಕೆ' ಮೂಲತಃ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂ ನಗರದಲ್ಲಿ ಬೆಳಕಿಗೆ ಬಂದಿದೆ. ಕೋಲಾರ ಜಿಲ್ಲೆಯ ಗಡಿ ಭಾಗಕ್ಕೆ ಹಬ್ಬಿಕೊಂಡಿರುವ ಕುಪ್ಪಂನ ಜನಪದ ವಲಸೆ, ನಂಟಸ್ತಿಕೆ, ಕೊಳು–ಕೊಡುಗೆಯ ಸಂಬಂಧಗಳ ಪ್ರಭಾವ ಜನಪದ ಕಲೆಯಾದ ಕೇಳಿಕೆ ಪ್ರಸ್ತುತ ಮೊರಸುನಾಡು ಎಂದು ಕರೆಯುವ ಕೋಲಾರ ಜಿಲ್ಲೆಯ ಗಡಿಭಾಗದಲ್ಲಿ ಜನಪ್ರಿಯಗೊಂಡಿದೆ.

## 'ಕೇಳಿಕೆ' ಪದದ ನಿಷ್ಪತ್ತಿ

ಕೇಳಿಕೆ ಎಂಬ ಪದವು ಅಚ್ಚಗನ್ನಡ ಪದವಾಗಿದ್ದು, ಸಾಮಾನ್ಯವಾಗಿ ಕೇಳಿಕೆ ಎಂದರೆ 'ಕೇಳಿಸಿಕೊಳ್ಳಿ' ಎಂಬಸರಳವಾದ ಅರ್ಥವನ್ನು ಹೊಂದಿದೆ. ಮೂಲತಃ ಕೇಳಿಕೆ ಎಂದರೆ 'ಜಮಾಇಂಪು' ಎಂಬ ಅರ್ಥವಿದ್ದು, ಜನರೆಲ್ಲಾ ಒಂದೆಡೆ ಸೇರಿ ಯಾವುದೋ ಒಂದು ಪ್ರಸಂಗವನ್ನು ಅಥವಾ ಕತೆಯನ್ನು ಕಲಾವಿದರ ಮೂಲಕ ಕೇಳುವುದು ಅಥವಾ ಒಂದು ಐತಿಹಾಸಿಕ ಘಟನೆಯನ್ನು ಮತ್ತೊಬ್ಬ ವ್ಯಕ್ತಿಯ ಮೂಲಕ ಕೇಳುವುದಾಗಿದೆ. ಕೇಳಿಕೆಯನ್ನು 'ಡಾನ್ಸ್ ಡ್ರಾಮಾ' ಎಂದೂ ಕರೆಯುತ್ತಾರೆ.

## ಕೇಳಿಕೆ ಪದದ ಕೆಲವು ಉಲ್ಲೇಖಗಳು

ವಚನ ಕಾಲಘಟ್ಟದಲ್ಲೂ ಕೇಳಿಕೆ ಎಂಬ ಪ್ರಕಾರ ಪ್ರಚಲಿತದಲ್ಲಿತ್ತು ಎಂಬುದಕ್ಕೆ ಆಧಾರವಾಗಿ ಅಲ್ಲಮಪ್ರಭುಗಳ ವಚನ ಹೀಗಿದೆ.

"ಇಷ್ಟಲಿಂಗಕ್ಕೆ ಅಂಗದಲ್ಲಿಯೇ ಮಜ್ಜನ
ಲಲಾಟದಲ್ಲಿಯೆ ಗಂಧಾಕ್ಷತೆ
ತುಱುಬಿದ ಪುಷ್ಪಚಯವೆ ಲಿಂಗಕ್ಕೆ ಪೂಜೆ
ಜಿಹ್ವೆ ಸೋಂಕಿದ ಷಡುರಸಾನ್ನವೆ ಲಿಂಗಕ್ಕೆ ನೈವೇದ್ಯ
ತಾಂಬೂಲ ಸವಿಹವೆ ಲಿಂಗಕ್ಕೆ ವೀಳೆಯ
ಅಂಗಚ್ಛಾದನ ವಸ್ತ್ರವೆ ಲಿಂಗಕ್ಕೆ ವಸ್ತ್ರ
ಕಂಡು ಕೇಳಿದ ಗೀತವಾದ್ಯ ನೃತ್ಯಾದಿಗಳೆ ಲಿಂಗದ ಕೇಳಿಕೆ"

ನೋಡುವ ಮತ್ತು ಕೇಳುವ ಗೀತವಾದ್ಯ ನೃತ್ಯಗಳ ಮೇಳವೆ 'ಕೇಳಿಕೆ' ಎನ್ನಲಾಗುತ್ತಿದೆಂಬುದು ಈ ಪಠ್ಯಭಾಗದಿಂದ ಅರಿಯಬಹುದಾಗಿದೆ.

ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿಯೂ ಕೇಳಿಕೆಯ ಪ್ರಸ್ತಾಪ ಮಾಡಲಾಗಿದೆ. ಹರಿಹರನ' ಮಲುಹಣನ ರಗಳೆ'ಯಲ್ಲಿ ನರ್ತಿಸುತ್ತಿದ್ದ ಮಲುಹಣಿ, ಮಲುಹಣನನ್ನು ನೋಡಿ ನರ್ತಿಸುವುದನ್ನೇ ನಿಲ್ಲಿಸಿ ಅವನನ್ನೇ ನೋಡುತ್ತ ನಿಂತುಬಿಡುತ್ತಾಳೆ. ಆಗ "ರಂಗಮಂಟಪಂ ವಿರಹ ಮಂಟಪ ಮಾದುದು, ಈಶ್ವರ ಕೇಳಿಕೆ ರತೀಶ್ವರ ಕೇಳಿಕೆಯಾದುದು" ಎಂದು ಕೇಳಿಕೆಯ ಬಗ್ಗೆ ಉಲ್ಲೇಖ ಬರುತ್ತದೆ. ತಾಳ, ಮದ್ದಳೆ, ಆವುಜ, ಕರಡೆ, ವೀಣೆ, ಕಿನ್ನರಿ ಕೌಸಾಳವಾಸ, ಜೀವಣಿಗರ ಸಂಗೀತದ ನಡುವೆ ಮಲುಹಣಿ ಹಾಡುತ್ತ ನರ್ತಿಸುವುದಕ್ಕೆ 'ಕೇಳಿಕೆ' ಎಂದು ಹೇಳಿದ್ದಾರೆ. ಹರಿಹರನ ಇಲ್ಲಿಯವರೆಗಿನ ಉಲ್ಲೇಖಗಳಿಂದ 'ಕೇಳಿಕೆ'ಗೆ ಅರ್ಥವನ್ನು ಸ್ಪಷ್ಟವಾಗಿ ಹಲವು ಆಧಾರಗಳಿಂದ ಗ್ರಹಿಸಬಹುದು.

ತೆಲುಗಿನ ಬಸವಪುರಾಣದಲ್ಲಿ "ಪಸಂಡಿ ಗಿರ್ಗಟ್ ಕೇಳಿಕಲುನು" ಎಂಬಲ್ಲಿ ಕೇಳಿಕೆಯ ಉಲ್ಲೇಖ ಇದೆ. ಈ ಕೃತಿಯಲ್ಲಿ 14 ಬಾರಿ ಕೇಳಿಕೆ ಪದ ಪ್ರಯೋಗ ವಾಗಿದೆ. ಈ ಕಾವ್ಯದಲ್ಲಿ ಆಡುವ, ಕುಣಿಯುವ, ನಟಿಸುವ ಎಂಬ ಅರ್ಥಗಳಲ್ಲಿ ಕೇಳಿಕೆ ಪದವು ಪ್ರಯೋಗವಾಗಿದೆ.

ಕನಕದಾಸರ ಕೀರ್ತನೆಗಳಲ್ಲೂ ಕೇಳಿಕೆ ಎಂಬ ಪದ ಪ್ರಯೋಗವಿದೆ.ನಾಟಕಕ್ಕೆ ಸಂಬಂಧಪಟ್ಟಂತೆ ಈ ಶಬ್ದವನ್ನು ಅವರು ಬಳಸಿದ್ದಾರೆ. ಎಂ.ಚಿದಾನಂದಮೂರ್ತಿ ಅವರು ಕೇಳಿಕೆ ಪದದ ಅರ್ಥವನ್ನು "ಆಟ, ಕುಣಿತ, ಅಭಿನಯ, ಸಾಭಿನಯವಾಗಿ ಹಾಡು" ಎಂದು ಹೇಳಿದ್ದಾರೆ. ಈ ಮೂಲಕ 'ಕೇಳಿಕೆ' ಎಂಬುದು ಪ್ರಾಚೀನ ಕಾಲದಿಂದಲೂ ಸಾಗಿಬಂದ ಕಲೆಯಾಗಿದೆ ಎಂಬುದು ಐತಿಹಾಸಿಕ ಸತ್ಯವಾಗಿದೆ.

ಜನಪದ ಕತೆಗಳು ಮತ್ತು ಐತಿಹಾಸಿಕ ಘಟನೆಗಳನ್ನು ಆರಿಸಿಕೊಂಡು

ಕೇಳಿಕೆಗಳನ್ನು ಸಿದ್ಧಪಡಿಸುತ್ತಿದ್ದರು. 'ಸಂಗೊಳ್ಳಿ ರಾಯಣ್ಣ', 'ಪಿರಿಯಾಪಟ್ಟಣ ಕಾಳಗ', 'ಟಿಪ್ಪುಸುಲ್ತಾನ', 'ಮಾಗಡಿ ಕೆಂಪೇಗೌಡ', 'ಕಿತ್ತೂರು ರಾಣಿ ಚೆನ್ನಮ್ಮ', 'ಹಲಗಲಿಬೇಡರು'– ಇತ್ಯಾದಿ ಕಥನಗಳನ್ನು ಪೌರಾಣಿಕ ಹಿನ್ನಲೆಯಲ್ಲಿ ಜನಪದ ರಂಗವೇದಿಕೆಗಳ ಮೇಲೆ ಕೇಳಿಕೆ ಸ್ವರೂಪದಲ್ಲಿ ಆಡುತ್ತಿದ್ದರು.ಈ ರೀತಿ ವೇದಿಕೆಯ ಮೇಲೆ ಅಭಿನಯ ಮಾಡುವುದು ಆ ಒಂದು ಐತಿಹಾಸಿಕ ಘಟನೆಯ ತ್ಯಾಗ, ಬಲಿದಾನ, ಪರಾಕ್ರಮ, ವೀರತನ, ಸಾಹಸಗಳ ವರ್ಣನೆಯನ್ನು ವ್ಯಕ್ತಪಡಿಸು ವುದರ ಮೂಲಕ ಜನವರ್ಗಕ್ಕೆ, ಜೀವನಕ್ಕೆ ಸ್ಫೂರ್ತಿ ದೊರೆಯುತ್ತಿತ್ತು. ಹೀಗೆ ಸಮಾಜದಲ್ಲಿ ನಡೆದ ಚಾರಿತ್ರಿಕ ಘಟನೆಗಳನ್ನು ಈ ರೀತಿ ನಾಟಕದ ಮೂಲಕ ಅಭಿವ್ಯಕ್ತಪಡಿಸುವುದರಿಂದ ಚರಿತ್ರೆಯಲ್ಲಿ ನಡೆದು ಹೋದ ಘಟನೆಗಳ ವಿವರಗಳನ್ನು ಪುನಃ ಮನನ ಮಾಡಿಕೊಳ್ಳುವುದರ ಜೊತೆಗೆ ಜನರ ಬದುಕನ್ನು ನೈತಿಕತೆಯ ಕಡೆಗೆ ತಿರುಗಿಸುವ ಜೊತೆಗೆ ಅರಿವನ್ನು ನೀಡುವ ಪ್ರಯತ್ನ ಕೇಳಿಕೆಗಳಲ್ಲಿ ಕಂಡುಬರುತ್ತದೆ.

ವಿಶೇಷ ದಿನಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳ ಸಮಯದಲ್ಲಿ ಕೇಳಿಕೆ ಗಳನ್ನು ಆಡಿಸುತ್ತಿದ್ದರು. ವೇದಿಕೆಯನ್ನು ಸುಂದರವಾಗಿ ಸಿದ್ಧಪಡಿಸಲಾಗುತ್ತಿತ್ತು. ರಂಗಮಂಟಪದ ಮೇಲೆ ಪಾತ್ರಧಾರಿಗಳು ಬಂದಾಗ ಸರಿಹೊಂದುವ ಹಾಗೆ ಪರದೆಗಳನ್ನು ಬದಲಾವಣೆ ಮಾಡಲಾಗುತ್ತಿತ್ತು. ಇದರಿಂದ ನೋಡುವ ಸಹೃದಯರಿಗೆ ತಮ್ಮ ಮನೋಭಾವದಲ್ಲಿ ಆ ಸನ್ನಿವೇಶಕ್ಕೆ ಸಂಪೂರ್ಣವಾಗಿ ಮಾರು ಹೋಗುವ ಹಾಗೆ ಆಗುತ್ತದೆ. ಪಾತ್ರಧಾರಿಗಳ ಪಾತ್ರಗಳ ಅಭಿನಯ ಜನರ ಮನಸ್ಸಿನಲ್ಲಿ ಅಚ್ಚಾದಂತೆ ಉಳಿಯುತ್ತದೆ.ಕೇಳಿಕೆ ನಡೆಯುವ ಸಂದರ್ಭದಲ್ಲಿ ಒಂದು ವೇಳೆ ಪಾತ್ರಧಾರಿಗಳ ಗೈರು ಹಾಜರಿ ಇದ್ದಲ್ಲಿ ಅವರ ಪಾತ್ರವನ್ನು ಪ್ರತಿಭಾವಂತ ಪಾತ್ರಧಾರಿಗಳು ನಿರ್ವಹಣೆ ಮಾಡುತ್ತಾರೆ. ಇಂತಹ ಸನ್ನಿವೇಶದಲ್ಲಿ ಕೇಳಿಕೆ ಕಲಿಸಿದ ಗುರುಗಳೇ ಒಮ್ಮೊಮ್ಮೆ ಸಿದ್ಧರಿರುತ್ತಿದ್ದರು. ಒಟ್ಟಾರೆಯಾಗಿ ಪಾತ್ರಧಾರಿಗಳು ತಮಗೆ ನೀಡಿದ ಪಾತ್ರಗಳಿಗೆ ಸಂಪೂರ್ಣ ನ್ಯಾಯ ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ– ಹೀಗೆ ಪಾತ್ರಧಾರಿಗಳು ಆರಂಭದಿಂದ ಅಂತ್ಯದವರೆಗೆ ಸುಲಲಿತವಾಗಿ ಕೇಳಿಕೆ ಆಡಿಕೊಂಡು ಬರುತ್ತಾರೆ. ಪಾತ್ರಧಾರಿಗಳು ತಮ್ಮ ಅಭಿನಯದಲ್ಲಿ ವ್ಯಕ್ತಪಡಿಸಿದ ನವರಸಗಳಿಗೆ ಸಹೃದಯರು ಮೆಚ್ಚುಗೆ ವ್ಯಕ್ತಪಡಿಸಿ ತಮ್ಮಲ್ಲಿ ಇರುವ ಹಣವನ್ನು ನಿಸ್ವಾರ್ಥದಿಂದ ಉಡುಗೊರೆಯಾಗಿ ನೀಡುತ್ತಾರೆ. ಈ ರೀತಿ ಹಣ ನೀಡಿದ ಸಹೃದಯರ ಮನೆತನದ ನಾಮವನ್ನು ಹೇಳಿ ಅವರಿಗೆ ಶುಭವಾಗಲಿ, ಧನವಂತರಾಗಲಿ, ಒಳ್ಳೆಯ ಆರೋಗ್ಯವನ್ನು ಭಗವಂತ ಕರುಣಿಸಲಿ ಎಂದು ಮಂಗಳಕರವಾದ ಶುಭ ಸಂದೇಶಗಳನ್ನು ವೇದಿಕೆ ಮೇಲೆ

ISSN : 3048-7137

ನಿರೂಪಣೆ ಮಾಡುತ್ತಾರೆ. ಇದರಿಂದ ಹಣ ನೀಡಿದವರಿಗೆ ತೃಪ್ತಿ ದೊರೆಯುತ್ತಿತ್ತು. ಕೇಳಿಕೆಯನ್ನು ವೇದಿಕೆ ಮೇಲೆ ಸಹೃದಯರಿಗೆ ಉಣಬಡಿಸುವ ಮುಂಚೆ ಕನಿಷ್ಠ ಆರು ತಿಂಗಳು ತಾಲೀಮು ನೀಡಲಾಗುತ್ತದೆ. ಪಾತ್ರಧಾರಿಗಳಿಗೆ ತಮ್ಮ ಪಾತ್ರಕ್ಕೆ ಸಂಬಂಧಿಸಿದ ಪಠ್ಯದ ಟಿಪ್ಪಣಿಗಳನ್ನು ಗುರುಗಳು ಸಣ್ಣ ಸಣ್ಣ ಪುಸ್ತಕಗಳಲ್ಲಿ ಬರೆದು ಕೊಡುತ್ತಿದರು. ಈ ಪುಸ್ತಕಗಳು ಕೇಳಿಕೆ ಪುಸ್ತಕಗಳೆಂದೇ ಜನಪ್ರಿಯಗೊಂಡಿವೆ. ಈ ರೀತಿ ಬರೆದುಕೊಟ್ಟ ಟಿಪ್ಪಣಿಗಳನ್ನು ಅಕ್ಷರ ಬಲ್ಲ ವಿದ್ಯಾವಂತರು ತುಂಬಾ ಸುಲಭವಾಗಿ ಕಲಿಯುತ್ತಿದ್ದರು. ಅಕ್ಷರ ಜ್ಞಾನದ ಪರಿಚಯ ಇಲ್ಲದೆ ಇರುವವರು ತಮ್ಮ ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವಾಗ ಅಕ್ಷರ ಜ್ಞಾನವುಳ್ಳವರ ಬಳಿ ಹೇಳಿಸಿಕೊಳ್ಳುತ್ತಿದ್ದರು. ಒಂದು ಕಡೆ ಹೊಲದ ಕೆಲಸವು ನಡೆಯುತ್ತಿತ್ತು ಮತ್ತು ಕೇಳಿಕೆಯ ಟಿಪ್ಪಣಿ ಅಭ್ಯಾಸ ಮಾಡಿದ ಹಾಗೆಯೂ ಆಗುತ್ತಿತ್ತು. ಕೇಳಿಕೆ ಆಡುವ ಜನರು ಸಾಮಾನ್ಯವಾಗಿ ರೈತಾಪಿ ವರ್ಗದವರೆ ಆಗಿರುವುದರಿಂದ ರಾತ್ರಿ ಊಟ ಮುಗಿದ ಮೇಲೆ ಕೇಳಿಕೆಯ ಅಭ್ಯಾಸ ಮಾಡುತ್ತಿದ್ದರು.ಹೀಗೆ ಆರು ತಿಂಗಳ ಕಾಲ ಅಭ್ಯಾಸ ಮಾಡಿದ ಮೇಲೆ ಸಂಪೂರ್ಣವಾಗಿ ಕೇಳಿಕೆಯನ್ನು ಆಡುತ್ತೇವೆ ಎಂಬ ಆತ್ಮವಿಶ್ವಾಸ ಬಂದ ಮೇಲೆ ಊರಿನ ಮುಖ್ಯವಾದ ಅಂಗಳದಲ್ಲಿ ತೆಂಗು ಹಸಿರಿನ ಚಪ್ಪರ ಹಾಕಿ ವೇದಿಕೆ ಸಿದ್ಧಪಡಿಸುತ್ತಾರೆ. ಕೇಳಿಕೆಯನ್ನು ಮೊದಲಿಗೆ ಗಣಪತಿ ಮತ್ತು ಶಾರದೆಯ ಸ್ತುತಿಯಿಂದ ಶುರುಮಾಡಲಾಗುತ್ತದೆ. ರಾತ್ರಿಯಿಂದ ಮುಂಜಾನೆಯ ತನಕ ಕೇಳಿಕೆಯು ನಡೆಯುತ್ತದೆ. ಮುಂಜಾನೆ ಮಂಗಳಾರತಿ ಮುಗಿಯುವ ವೇಳೆಗೂ ಮುಂಚೆ ಗರುಡ ಪಕ್ಷಿ ಕೇಳಿಕೆ ನಡೆಯುವ ವೇದಿಕೆಯ ಮುಂಭಾಗಕ್ಕೆ ಬಂದು ಪ್ರದಕ್ಷಣೆ ಹಾಕಿ ಹೋಗುತ್ತದೆ ಎಂದೂ, ಈ ರೀತಿ ಗರುಡ ಪಕ್ಷಿ ಬಂದು ವಾಗ್ದಾನ ಕೊಟ್ಟು ಹೋದರೆ ಕೇಳಿಕೆ ಸಂಪೂರ್ಣ ಯಶಸ್ವಿಯಾದ ಹಾಗೆ ಎಂಬ ನಂಬಿಕೆ ಈ ಭಾಗದವರಲ್ಲಿದೆ. ಇದರಿಂದಾಗಿಯೇ ಅವರ ಆತ್ಮವಿಶ್ವಾಸವು ಗಟ್ಟಿಗೊಳ್ಳುತ್ತದೆ. ಇದರಿಂದ ಕೇಳಿಕೆ ಆಡಿದ ಪಾತ್ರಧಾರಿಗಳು ಮತ್ತು ಸಹೃದಯಿ ಬಳಗ ತುಂಬಾ ಸಂತೋಷಗೊಳ್ಳುತ್ತಾರೆ. ಇಷ್ಟೆಲ್ಲಾ ಅಚ್ಚುಕಟ್ಟಾಗಿ ಕೇಳಿಕೆ ಯಶಸ್ಸು ಕಾಣಲು ಕಾರಣಕರ್ತರಾದ ಕೇಳಿಕೆ ಕಲಿಸಿದ ಪೂಜ್ಯ ಗುರುಗಳಿಗೆ ಭಕ್ತಿಯಿಂದ ಪಾತ್ರಧಾರಿಗಳು ಹಣ, ಗೋವು, ಹಣ್ಣು, ದವಸ-ಧಾನ್ಯಗಳನ್ನು ಉಡುಗೊರೆಯಾಗಿ ನೀಡುತ್ತಾರೆ.

## ಕೇಳಿಕೆ ವಾದ್ಯಗಳು ಮತ್ತು ವೇಷಭೂಷಣಗಳು

ಕೇಳಿಕೆ ಆಡುವಾಗ ಹಲಗೆ, ಕೊಳಲು, ಘಡ, ಚಿಟಕೆ, ಜಾಗಟೆ, ಡಕ್ಕಿ, ತಬಲ, ತಾಳ, ಶಂಖ, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನು ಬಳಸುತ್ತಾರೆ. ಈ

ವಾದ್ಯಗಳಿಗೆ ಅರಿಶಿಣ, ಕುಂಕುಮ ಹಚ್ಚಿ, ಹೂವಿನಿಂದ ಅಲಂಕರಿಸಿ, ಕರ್ಪೂರದ ಆರತಿ ಬೆಳಗಿಸಿ, ಪೂಜೆ ಮಾಡಿ ದೇವರನ್ನು ಸ್ಮರಿಸುತ್ತಾ ವಾದ್ಯಗಳನ್ನು ನುಡಿಸಲು ಪ್ರಾರಂಭಿಸುತ್ತಾರೆ. ವಾದ್ಯಗಳನ್ನು ನುಡಿಸುವರು ದ್ವಿಪದಿ, ತ್ರಿಪದಿ, ಕಂದ ಪದ್ಯಗಳಿಗೆ ಸರಿ ಹೊಂದುವ ಹಾಗೆ ತಾಳಬದ್ಧವಾಗಿ ವಾದ್ಯಗಳನ್ನು ನುಡಿಸುತ್ತಾರೆ. ವಾದ್ಯಗಾರರ ಕೈ ಚಳಕದಿಂದ ಕೇಳಿಕೆಗೆ ಉಲ್ಲಸಿತವಾದ ಮೆರಗು ಹೆಚ್ಚಾಗುತ್ತದೆ. ಪಾತ್ರಧಾರಿಗಳಿಗೆ ಪ್ರೋತ್ಸಾಹ ದೊರೆಯುತ್ತದೆ. ಈ ವಾದ್ಯಗಳು ಹಾಡನ್ನು ಹೇಳುವಾಗ ಹಿಮ್ಮೇಳ–ಮುಮ್ಮೇಳ ತಂಡದವರಿಗೆ ಕೋರಸ್ ಆಗಿ ಬಳಕೆ ಯಾಗುತ್ತವೆ. ಈ ವಾದ್ಯಗಳ ಇಂಪಾದ ಲಯಕ್ಕೆ ಹಾಡನ್ನು ಸ್ಫೂರ್ತಿಯಿಂದ ಹೇಳಲು ಪ್ರೋತ್ಸಾಹ ಸಿಗುತ್ತದೆ.

ಕೇಳಿಕೆ ಆಡುವ ಪಾತ್ರಧಾರಿಗಳು ಪಾತ್ರಕ್ಕೆ ತಕ್ಕಂತೆ ತಮ್ಮ ವೇಷಭೂಷಣಗಳಾದ ವಸ್ತ್ರ, ಕಾಲಿನ ಗೆಜ್ಜೆ, ಕೈ ಕಡಗ, ಕಿವಿ ಓಲೆ, ಕತ್ತಿನ ಸರಗಳು, ಢಾಬು, ಕತ್ತಿ–ಗುರಾಣಿ, ಬಿಲ್ಲು–ಬಾಣಗಳು, ತಲೆಗೆ ಕಿರೀಟ, ಎದೆಹಾರ, ಭುಜಕೀರ್ತಿಗಳನ್ನು ಧರಿಸುತ್ತಾರೆ. ಪಾತ್ರಗಳಿಗೆ ತಕ್ಕಂತೆ ಕಿರೀಟಗಳನ್ನು ಬೇರೆ ಬೇರೆ ಆಭರಣಗಳನ್ನು ತೊಟ್ಟು ಕೊಳ್ಳುವರು. ಹಣೆಗೆ ವಿಭೂತಿ, ಕುಂಕುಮ, ಅರಿಶಿಣವನ್ನು ಬಳಕೆ ಮಾಡುತ್ತಾರೆ. ಕೇಳಿಕೆ ಕಲಾವಿದರು ತಮ್ಮಲ್ಲಿ ಸಾಕಷ್ಟು ಹಣ ಇಲ್ಲದಿರುವ ವೇಳೆಯಲ್ಲಿ ಸ್ವತಃ ತಾವೇ ಮರದ ತೊಗಟೆಗಳಿಂದ, ಬಿದಿರು ಬಳ್ಳಿಗಳಿಂದ ಆಭರಣಗಳನ್ನು ತಯಾರಿಸಿ ಕೊಳ್ಳುತ್ತಾರೆ. ಹೀಗೆ ತಮಗೆ ಬೇಕಾದ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಂಡು ಕೇಳಿಕೆ ಆಡುತ್ತಿದ್ದರು. ಪುರುಷರು ಮಹಿಳಾ ಪಾತ್ರಗಳನ್ನು ನಿರ್ವಹಣೆ ಮಾಡಲು ತಮ್ಮ ತಲೆಯ ಕೇಶವನ್ನು ಉದ್ದವಾಗಿ ಬಿಡುತ್ತಾರೆ. ಪಾತ್ರಧಾರಿಗಳು ಅಭಿನಯಿಸುವಾಗ ಆ ಪಾತ್ರದಲ್ಲೇ ಮುಳುಗಿ ಹೋಗುತ್ತಾರೆ. ಇದರ ಜೊತೆಗೆ ತಾವು ಬಳಸುವ ಪರದೆಗಳು ಸನ್ನಿವೇಶಕ್ಕೆ ಅನುಗುಣವಾಗಿ ರಾಜರ ಅರಮನೆ, ಮುಖ್ಯ ಬೀದಿಗಳು, ಯುದ್ಧಭೂಮಿ, ನ್ಯಾಯ ಸಭೆಗಳು, ದೇವಾಲಯಗಳು ಇತರೆ ಸನ್ನಿವೇಶಕ್ಕೆ ಸರಿದೂಗುವ ಹಾಗೆ ಬದಲಾಗುತ್ತಿರುತ್ತವೆ. ತಮ್ಮ ಬಳಿ ಇರುವ ಹಳೆಯ ಸೀರೆಗಳಿಗೆ, ಹಳೆಯ ಬಟ್ಟೆಗಳಿಗೆ ಬಣ್ಣವನ್ನು ಹಾಕಿ ಪರದೆಗಳಾಗಿ ಬಳಸುವ ಮೂಲಕ ಖರ್ಚು ವೆಚ್ಚಗಳ ಮೊತ್ತ ಕಡಿಮೆ ಮಾಡಿಕೊಳ್ಳುವ ಜಾಣ್ಮೆ, ಚುರುಕುತನ ಕಲಾವಿದರಲ್ಲಿ ಇತ್ತು. ಕೇಳಿಕೆ ಕುಣಿತವು ಒಂದೆಜ್ಜೆ, ಎರಡೆಜ್ಜೆ, ಮೂರೆಜ್ಜೆ ಎಂಬಂತೆ ರೂಢಿಯಲ್ಲಿ ಇದ್ದವು. ಪಾತ್ರಧಾರಿಗಳು "ಭಲೇ... ಭಲೇ... ಭಲೇ... ಹೋ... ಹೋ..." ಎಂದು ಆರ್ಭಟಿಸುತ್ತಾ ಭಾವಾಭಿನಯದಿಂದ ವಾದ್ಯಗಳ ಆರ್ಭಟ ಹೆಚ್ಚಿದಂತೆಲ್ಲ ಕುಣಿತದ ಶೈಲಿ, ವಿನ್ಯಾಸಗಳನ್ನು ಬಹು ಸ್ವರೂಪದಲ್ಲಿ ಬದಲಾಯಿಸುತ್ತಿರುತ್ತಾರೆ. ಕೇಳಿಕೆಯಲ್ಲಿ ಭಾಗವಹಿಸುವ ಎಲ್ಲ

ISSN : 3048-7137

ಪಾತ್ರಧಾರಿಗಳು ತಾವು ಅಭಿನಯ ಮಾಡುವ ಹಾಡು, ಸಂಭಾಷಣೆಗಳನ್ನು ಹಿಮ್ಮೇಳ-ಮುಮ್ಮೇಳದವರನ್ನು ಬಳಸಿಕೊಂಡು ಅಭಿನಯ ಮಾಡುತ್ತಾರೆ. ಹಾಡನ್ನು ತಾವು ಅರ್ಧ ಭಾಗ ಚರಣ ಹಾಡಿ ಉಳಿದ ಅರ್ಧ ಚರಣವನ್ನು ಹಿಮ್ಮೇಳದವರು ಜೋರಾಗಿ ಹಾಡುತ್ತಾರೆ. ಕಂದ ಪದ್ಯಗಳು ಬಂದಾಗ ಪಾತ್ರಧಾರಿಗಳೇ ಹಾಡುತ್ತಾರೆ. ಹಿಂದಿನ ಕಾಲದಲ್ಲಿ ರಾತ್ರಿ ಕತ್ತಲು ಆವರಿಸುವ ಕಾರಣದಿಂದ ಪಂಜುಗಳನ್ನು ಕಟ್ಟಿ 'ಕೇಳಿಕೆ' ಪ್ರದರ್ಶಿಸುತ್ತಿದ್ದರು. ನಂತರ ಪೆಟ್ರೋ ಮ್ಯಾಕ್ಸ್ ದೀಪಗಳು ಬಂದವು. ಇಂದು ರಂಗು ರಂಗಿನ ವಿದ್ಯುತ್ ದೀಪಗಳಿವೆ. ಆದರೆ ಕೇಳಿಕೆ ಹಾಡುವ ಕೇಳುವ ಕಲಾವಿದರು ತುಂಬಾ ವಿರಳವಾಗುತ್ತಿದ್ದಾರೆ.

ಕೇಳಿಕೆಗಳಲ್ಲಿ ಕಂಡು ಬರುವ ಹಾಡಿನ ಧಾಟಿಯು ಈ ಮುಂದಿನಂತಿರುತ್ತದೆ.

ಉದಾಹರಣೆ : "ತಂದಾನಾನಾ... ತಂದಾನಾ... ತಂದಾನ ತಾನ....
ತನ ತಂದನ ತಾನ ತಂದಾನ ತಾನ..."

ಈ ರೀತಿಯ ಲಯವನ್ನು ಬಳಸುತ್ತಾರೆ.ಕೇಳಿಕೆಯಲ್ಲಿ ಮಹಿಳೆಯರು ವೃತ್ತಾಕಾರದಲ್ಲಿ ನೃತ್ಯಗಳನ್ನು ಮಾಡುತ್ತಾರೆ. ಇದು ಕುಣಿತವನ್ನು ನೋಡುವ ಜನರಿಗೆ ತುಂಬಾ ಆಕರ್ಷಣೀಯವಾಗಿರುತ್ತದೆ. ಸಣ್ಣ ಸಣ್ಣ ಮಕ್ಕಳು ವೇದಿಕೆಯ ಮುಂಭಾಗದಲ್ಲಿ ಹೆಜ್ಜೆ ಕುಣಿತಗಳ ಅನುಕರಣೆ ಮಾಡುವುದನ್ನು ನೋಡಲು ಸಂತಸವಾಗುತ್ತದೆ.

## ಕೋಲಾರ ಜಿಲ್ಲೆಯಲ್ಲಿ ಆಡುತ್ತಿದ್ದ ಕೇಳಿಕೆ ಪ್ರಸಂಗಗಳು

ಪ್ರಸ್ತುತ ಕೋಲಾರ ಜಿಲ್ಲೆಯ ವ್ಯಾಪ್ತಿಗೆ ಸೇರಿರುವ ಬಂಗಾರಪೇಟೆ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಪೌರಾಣಿಕ ಮತ್ತು ದೇಶೀ ಕೇಳಿಕೆಗಳು ಎಂಬ ಎರಡು ಬಗೆಯಲ್ಲಿ ಕೇಳಿಕೆಗಳು ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾದವು ಪೌರಾಣಿಕ ಪ್ರಸಂಗಗಳಾದ: 'ಕುರುಕ್ಷೇತ್ರ', 'ಕೃಷ್ಣಲೀಲೆ', 'ಚೋರಚರಿತ್ರೆ', 'ದಾನವೀರಶೂರ ಕರ್ಣ', 'ಪಂಚವಟಿ ರಾಮಾಯಣ', 'ಭಕ್ತಮಾರ್ಕಂಡೇಯ', 'ಭಕ್ತಪ್ರಹ್ಲಾದ', 'ಭೂಕೈಲಾಸ', 'ಮಾಯಾಬಜಾರ್', 'ರಾಮಾಂಜನೇಯ ಯುದ್ಧ', 'ಲಂಕಾದಹನ', 'ಲವಕುಶ', 'ವಿರಾಟಪರ್ವ', 'ವೀರ ಅಭಿಮನ್ಯು', 'ಶಶಿರೇಖಾ ಕಲ್ಯಾಣ', 'ಶಿವಜಲಂಧರ', 'ಸತಿಸಾವಿತ್ರಿ', 'ಸತ್ಯಹರಿಶ್ಚಂದ್ರ', 'ಹಳ್ಳಿರಾಣಿ'ಗಳು.

**ದೇಶೀ ಪ್ರಸಂಗಗಳು :** 'ಕರಿಭಂಟನ ಕಥೆ', 'ಕಾಟಮರಾಜು ಕಥ', 'ಕಂಬೋಜರಾಜ ಕಥ', 'ಚೆಂಚುಲಕ್ಷ್ಮಿ', 'ತಿಮ್ಮಮ್ಮ ಕಥ', 'ದೇಶಿಂಗರಾಜು ಕಥ',

‘ನಲ್ಲತಂಗ’, ‘ಪರ್ಯಾಯ ಪಾಪಡು’, ‘ಪೆದ್ದಬೊಬ್ಬಲಿ ರಾಜ’, ‘ಬಿಸೀಗೌಡನ ಕಥೆ’, ‘ಬಾಲನಾಗಮ್ಮ’, ‘ಮುಗ್ಗುರು ಮರಾಠಿಲು’, ‘ಸಾಸಲು ಚಿನ್ನಮ್ಮ’, ‘ಸಾರಂಗಧರ’, ‘ಸುಕ್ಕಲೂರು ರಾಮ’, ‘ವೀರಬ್ರಹ್ಮಯ್ಯ ಚರಿತ್ರ’, ‘ವೆಂಕಟಾಚಲ ಮಹಾತ್ಮೆ’–ಹೀಗೆ ಕೋಲಾರ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಕೇಳಿಕೆ ಪ್ರಸಂಗಗಳಾದ ಪೌರಾಣಿಕ ಮತ್ತು ದೇಶೀ ಪ್ರಸಂಗಗಳನ್ನು ಹಬ್ಬಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ವಿಜೃಂಭಣೆಯಿಂದ ಆಡುತ್ತಾರೆ. ಇವುಗಳಲ್ಲಿ ‘ಕರಿಭಂಟನ ಕಾಳಗ’, ‘ಸುಂದರ ಕಾಂಡ ರಾಮಾಯಣ’ ಹಾಗೂ ‘ಕೃಷ್ಣಲೀಲೆ ಪ್ರಸಂಗ’ಗಳು ಜನಪ್ರಿಯಗೊಂಡಿವೆ. ಕೇಳಿಕೆಯು ಒಂದು ನಿರ್ದಿಷ್ಟ ಜನಸಮುದಾಯಕ್ಕೆ ಸೀಮಿತ ವಾಗಿರದೆ, ಸಮಾಜದ ಎಲ್ಲಾವರ್ಗದ ಜನ ಸಮುದಾಯಗಳನ್ನು ಒಳಗೊಳ್ಳು ವಂತಹ ಒಂದು ಬಯಲಾಟದ ಕಲೆಯಾಗಿದೆ.

**ಕೋಲಾರದಲ್ಲಿ ಜನಪ್ರಿಯಗೊಂಡ ಕೇಳಿಕೆ ಕಥೆಗಳ ಸಂಕ್ಷಿಪ್ತ ಸಾರಾಂಶ**

## ಬಾಲನಾಗಮ್ಮ:

ಬಾಲನಾಗಮ್ಮ ಕೇಳಿಕೆಯನ್ನು ಕನ್ನಡ ಮತ್ತು ತೆಲುಗು ಎರಡು ಭಾಷೆಗಳಲ್ಲಿ ಕೇಳಿಕೆ ಕಲಾವಿದರು ಮೌಖಿಕವಾಗಿ ರಂಗದ ಮೇಲೆ ಆಡುತ್ತಾರೆ. ಸಾಮಾನ್ಯವಾಗಿ ಮಕ್ಕಳಿಲ್ಲದ ರಾಜಾರಾಣಿಯರ ಕಥೆಯಂತೆ ಬಾಲನಾಗಮ್ಮನ ಕಥೆಯು ಶುರುವಾಗುತ್ತದೆ. ಬಾಲನಾಗಮ್ಮನ ತಾಯಿ ಭೂಲಕ್ಷ್ಮಿದೇವಿ ನಾಗಮುನೀಂದ್ರನಿಂದ ಮಕ್ಕಳ ಫಲವನ್ನು ಪಡೆದಿರುತ್ತಾಳೆ. ಮಕ್ಕಳಾದ ನಂತರ ನಿನಗೆ ಆಹುತಿ ಆಗುತ್ತೇನೆಂದು ನಾಗಮುನೀಂದ್ರನಿಗೆ ಭೂಲಕ್ಷ್ಮಿದೇವಿ ಭರವಸೆ ಕೊಟ್ಟಿರುತ್ತಾಳೆ. ಇದನ್ನು ತಿರಸ್ಕರಿಸಿದ ಆಕೆಯ ಪತಿ ನವಭೋಜರಾಜ ಭೂಲಕ್ಷ್ಮಿದೇವಿಯನ್ನು ಆಹುತಿಯಾಗಲು ಬಿಡುವುದಿಲ್ಲ. ಆದರೆ ಮಾಯಾಜಾಲದಿಂದ ನಾಗಮುನೀಂದ್ರ ಅವಳನ್ನು ಆಹುತಿ ತೆಗೆದುಕೊಳ್ಳುತ್ತಾನೆ. ಕೊಟ್ಟ ಭಾಷೆಗೆ ತಪ್ಪಬಾರದು ತಪ್ಪಿದಲ್ಲಿ ಕೇಡು ನಿಶ್ಚಿತ ಎಂಬ ನಂಬಿಕೆಯ ಮೌಲ್ಯವನ್ನು ಈ ಕೇಳಿಕೆ ಕಥೆ ತಿಳಿಸುತ್ತದೆ. ಭೂಲಕ್ಷ್ಮಿದೇವಿಗೆ ಜನಿಸಿದ ಅತಿ ಸುಂದರವಾಗಿರುವ ಬಾಲನಾಗಮ್ಮನನ್ನು ಬಾಣಂತಿ ಸಮಯದಲ್ಲಿ ಒಬ್ಬ ಅತೀಂದ್ರೀಯ ಶಕ್ತಿಗಳಿರುವ ಮಾಯಾವಿ ಅಪಹರಿಸುತ್ತಾನೆ. ಆ ಸಂದರ್ಭದಲ್ಲಿ ಬಿಟ್ಟು ಹೋದ ಮಗನು ಬೆಳೆದು ಮಾಯಾವಿಯ ವಿರುದ್ಧ ಸಾಹಸಮಯವಾಗಿ ಹೋರಾಟ ಮಾಡಿ ತನ್ನ ತಾಯಿಯನ್ನು ರಕ್ಷಿಸಿಕೊಂಡು ಬರುತ್ತಾನೆ. ಒಟ್ಟಾರೆ ಈ ಕೇಳಿಕೆಯಲ್ಲಿ ಸಹೃದಯಿ ಜನಸಮುದಾಯಕ್ಕೆ ಉಲ್ಲಾಸಮಯವಾದ ಮನೋರಂಜನೆ ದೊರೆಯುತ್ತದೆ.

ಪ್ರಸ್ತುತ ಈ ಕೇಳಿಕೆ ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಚಲನಚಿತ್ರ ಗೊಂಡು ಅದ್ದೂರಿ ಯಶಸ್ಸನ್ನು ಕಂಡು ಇಂದಿಗೂ ಜನಮನದಲ್ಲಿ ನಿಂತಿದೆ. ಇದನ್ನು ಇಂದಿಗೂ ವಿಶೇಷ ದಿನಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ಹರಿಕಥೆ ಮತ್ತು ನಾಟಕ ಸ್ವರೂಪದಲ್ಲಿ ಆಡಲಾಗುತ್ತದೆ. ಉದಾಹರಣೆಗೆ ಬಾಲನಾಗಮ್ಮನ ಕಥೆಯಲ್ಲಿ ಬರುವ ನವಭೋಜರಾಜ ಮತ್ತು ಭೂಲಕ್ಷ್ಮೀದೇವಿ ಮಕ್ಕಳ ಫಲವನ್ನು ಕೇಳಿ ಪ್ರಾರ್ಥಿಸುವ ಒಂದು ಹಾಡು ಕನ್ನಡದಲ್ಲಿ ಈ ರೀತಿಯಾಗಿದೆ–

ಹರವು ನೋಡಿ ಕೆರೆ ಕಟ್ಟಿಸಿದೆ
ಜಲ ನೋಡಿ ಬಾವಿ ತೆಗೆಸಿದೆ
ಕಣಿವೆ ನೋಡಿ ಕಾಡು ಬೆಳೆಸಿದೆ
ಆಯ ನೋಡಿ ಗುಡಿ ಕಟ್ಟಿಸಿದೆ
ಇರುವೆಗಳಿಗೆ ಸಕ್ಕರೆ ಹಾಕಿದೆ
ನಾಗ ನಾಗರಗಳಿಗೆ ಹಾಲು ಎರೆದೆ
ಕಾಶಿಗೆ ಹೋಗಿ ಹರಕೆ ಕಟ್ಟಿದೆ
ಎಷ್ಟಷ್ಟೋ ಮಾಡಿದರೂ
ಮಕ್ಕಳ ಫಲವಿಲ್ಲ ಮಕ್ಕಳ ಫಲವಿಲ್ಲ

ಹೀಗೆ ಸರಳ ಸುಂದರವಾದ ಕಾವ್ಯದಿಂದ ಭಾಸವಾಗುವ ಈ ಕೇಳಿಕೆ ಈ ಭಾಗದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಮನಕಲಕುವ ಸನ್ನಿವೇಶಗಳು, ಮಕ್ಕಳಿಲ್ಲದವರ ಪಾಡು ಹಾಡಾಗಿ ಈ ಕೇಳಿಕೆಯನ್ನು ಹೃದ್ಯವಾಗಿಸುವುದುಂಟು. ಇದರಲ್ಲಿ ಮನುಷ್ಯ–ಅಮಾನುಷ್ಯ ಶಕ್ತಿಗಳು, ಮನುಷ್ಯ–ಪ್ರಾಣಿಗಳು, ಅತೀಂದ್ರಿಯ ಮಾಯಾಶಕ್ತಿಗಳು– ಹೀಗೆ ಅನೇಕಾನೇಕ ವಿಷಯಗಳು ಒಂದು ಹೊಸ ಲೋಕವನ್ನೇ ಸೃಷ್ಟಿಸಿ ಪ್ರೇಕ್ಷಕರನ್ನು ಮೈಮರೆಸುತ್ತವೆ, ಅಳಿಸುತ್ತವೆ, ನಗಿಸುತ್ತವೆ, ಉದ್ರೇಕಗೊಳ್ಳುವಂತೆ ಮಾಡುತ್ತವೆ. ದುಷ್ಟಶಕ್ತಿಗಳ ವಿರುದ್ಧ ರೊಚ್ಚಿಗೇಳುವಂತೆ ಮಾಡುತ್ತವೆ. ನಾಟಕ ಅವಾಸ್ತವ, ಪ್ರೇಕ್ಷಕ ವಾಸ್ತವ.... ಆದರೂ ಈ ಬೆಸುಗೆ ಶತಮಾನಗಳಿಂದ ಲೋಕರಂಜನಿಯವಾಗಿವೆ. ಮನೋರಂಜನೆ, ನೀತಿ, ಜ್ಞಾನ, ಕಲೆ, ಸಾಹಿತ್ಯ, ಸಂಗೀತ, ನಟನೆಗಳ ಸಂಗಮ ಈ ಬಾಲ ನಾಗಮ್ಮನ ಕಥೆ. ಹೆಣ್ಣಿನ ಬಯಕೆಗಳು, ಗೋಳು, ದುಃಖಗಳು ಒಂದೆಡೆಯಾದರೆ, ಸ್ತ್ರೀ ಸಂವೇದನೆಗಳು, ಬಂಜೆಯ ಗೋಳು, ತಾಯಿ–ಮಗನ ಪ್ರೀತಿ, ಅಸದೃಶ್ಯ ಸಾಹಸಗಳು ಈ ಕೇಳಿಕೆಯನ್ನು ಈ ಭಾಗದಲ್ಲಿ ತುಂಬಾ ಜನಪ್ರಿಯಗೊಳಿಸಿವೆ.

## ದೇಶಿಂಗರಾಜು ಕಥೆ

ಈ ಕೇಳಿಕೆ ಕತೆಯಲ್ಲಿ ಸ್ನೇಹದ ಮಹತ್ವವನ್ನು ತಿಳಿಸಿಕೊಡಲಾಗಿದೆ. ಸ್ನೇಹಕ್ಕೆ ಪೌರಾಣಿಕ ಹಿನ್ನಲೆಯಲ್ಲಿ ಕರ್ಣ–ದುರ್ಯೋಧನ, ಶ್ರೀಕೃಷ್ಣ–ಸುಧಾಮ, ದ್ರುಪದ–ದ್ರೋಣಾಚಾರ್ಯ ಮೊದಲಾದವರು ಇಡೀ ಚರಿತ್ರೆಯಲ್ಲೇ ಹೆಸರಾಗಿದ್ದಾರೆ. ಈ ರೀತಿಯ ಸ್ನೇಹದ ವ್ಯಾಮೋಹಕ್ಕೆ ಒಳಗಾಗಿರುವ ಇಲ್ಲಿನ ದೇಶಿಂಗರಾಜು ಮತ್ತು ಮೋತ್ಖಾನ್ ಅವರ ಸ್ನೇಹವೂ ನಿಷ್ಕಲ್ಮಶದಿಂದ ಕೂಡಿದುದಾಗಿದೆ. ಇವರ ಸ್ನೇಹಕ್ಕೆ ಪ್ರತೀಕವಾಗಿ ಯಾವುದೇ ಕಷ್ಟದ ಸಮಯದಲ್ಲೂ ಸಹಾಯ ಮಾಡುತ್ತೇನೆಂದು ಮೋತ್ಖಾನ್ ದೇಶಿಂಗರಾಜುವಿಗೆ ಮಾತು ಕೊಟ್ಟಿರುತ್ತಾನೆ. ಮುಂದೊಮ್ಮೆ ದೇಶಿಂಗ ರಾಜುವಿಗೆ ಕಷ್ಟ ಬಂದಾಗ ಮೋತ್ಖಾನ್, ಆತನ ಸಹೋದರ ಹುಸೇನ್ ಖಾನ್ ಮತ್ತು ಅವರ ತಾಯಿಯೂ ಸಹಾಯಕ್ಕೆ ಮುಂದಾಗುತ್ತಾರೆ. ಈ ಸಂದರ್ಭದಲ್ಲಿ ಇಡೀ ಮೋತ್ಖಾನ್ ಕುಟುಂಬವು ಸಾವಿನ ದವಡೆಯನ್ನು ಹೊಕ್ಕುತ್ತದೆ. ಇದರಿಂದ ಮನನೊಂದ ದೇಶಿಂಗರಾಜು ಇಡೀ ಜಗತ್ತಿನಲ್ಲಿ ತಾಯಿಗಿಂತ ಶ್ರೇಷ್ಠವಾದಂತಹ ಸಂಬಂಧ ಇಲ್ಲ ಎಂಬುದನ್ನು ನೆನೆದು ದುಃಖದಲ್ಲಿ ಮುಳಗುತ್ತಾನೆ. ದೇಶಿಂಗರಾಜನಿಗಾಗಿ ತನ್ನ ಪ್ರಾಣವನ್ನೇ ಒತ್ತೆ ಇಟ್ಟು ಪ್ರಾಣವನ್ನು ಕಳೆದುಕೊಳ್ಳುವ ಸ್ನೇಹಿತನ ನಿಷ್ಕಲ್ಮಶ ಸ್ನೇಹ, ಪ್ರೀತಿ, ಆತ್ಮೀಯತೆಗಳನ್ನು ನೆನಪಿಸಿಕೊಂಡು ಸ್ನೇಹ ಮತ್ತು ಮಾತೃ ಸಂಬಂಧಗಳ ಬಗ್ಗೆ ಇದ್ದಂತಹ ಗೌರವ, ಪ್ರೀತಿ, ವ್ಯಾಮೋಹದಿಂದ ದೇಶಿಂಗರಾಜು ತಾನು ಯಾರಿಗಾಗಿ ಬಾಳಲಿ, ಯಾರಿಗಾಗಿ ಬದುಕಲಿ ಎಂದು ಆಕ್ರೋಶದಿಂದ ತನ್ನ ಬಳಿಯಿದ್ದ ಕತ್ತಿಯನ್ನು ಮೇಲಕ್ಕೆ ಎಸೆದು ತನ್ನ ಶಿರವನ್ನು ಒಡ್ಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಹೀಗೆ ಐತಿಹಾಸಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬೆರೆತುಕೊಂಡಿರುವಂತಹ ದೇಶಿಂಗರಾಜು ಕಥೆ ಸ್ನೇಹ–ಸಂಬಂಧದ ವಿಶಿಷ್ಟ ಪ್ರಸಂಗವಾಗಿ ಕೇಳಿಕೆ ರೂಪದಲ್ಲಿ ಜನಸಮುದಾಯದ ಮಧ್ಯೆ ಯಾವ ರೀತಿಯ ಸ್ನೇಹ ಸಂಬಂಧಗಳು ಇರಬೇಕು ಎಂಬುದನ್ನು ತಿಳಿಸಿ ಕೊಡುತ್ತದೆ. ಒಟ್ಟಾರೆಯಾಗಿ ಈ ದೇಶಿಂಗರಾಜು ಕಥೆಯಲ್ಲಿ ಧರ್ಮವನ್ನು ಮೀರಿದ ಮಾನವೀಯ, ನೈತಿಕ ಮೌಲ್ಯಗಳನ್ನು ಭಿತ್ತಲಾಗಿದೆ. ಐತಿಹಾಸಿಕ ವಿಷಯವನ್ನು ಇಟ್ಟುಕೊಂಡು ಅಚ್ಚುಕಟ್ಟಾಗಿ ದೇಶೀ ಕೇಳಿಕೆ ರೂಪದಲ್ಲಿ ವಿನ್ಯಾಸ ನೀಡಿರುವುದು ಮೆಚ್ಚುವಂತಹದ್ದು. ದೇಶಿಂಗರಾಜು ಕಥಾ ಭಾಗದಲ್ಲಿ ನವಾಬ ತನ್ನ ಕೋಟೆಯನ್ನು ವರ್ಣನೆ ಮಾಡಿದ ಬಗೆ ಈ ರೀತಿ ಇದೆ.

ಹಾರಿಕೋಟೆಯ (ಅರ್ಕಾಟ್) ಹೆಬ್ಬುಲಿ ನಾನು
ಕೋಟೆಗೆ ತಕ್ಕ ರಣಸಿಂಹ ನಾನು

ಬೆಂಕಿಯ ನುಂಗಿ ಇದ್ದಿಲ ಉಗಿಯುವ
ಸಿಡಿಲನ್ನೇ ನುಂಗಿ ಅರಗಿಸಿಕೊಂಡವ
ಮೂರಡಿ ಮೀಸೆ ಮಾರುದ್ದ ಗಡ್ಡ
ಹಾರಿಕೋಟೆಯ ಹೆಬ್ಬುಲಿ ನಾನು
ಕೋಟೆಗೆ ತಕ್ಕ ರಣಸಿಂಹ ನಾನು.

ಈ ರೀತಿಯಾಗಿ ಕೋಟೆಯ ವರ್ಣನೆ ಮಾಡಿದ ಪರಿಯನ್ನು ನೋಡಬಹುದು. ಈ ರೀತಿಯ ಕೇಳಿಕೆಯ ಹಾಡುಗಳನ್ನು ಹಾಡುವವರು ಹೆಚ್ಚಾಗಿ ಗಂಡಸರೇ ಆಗಿರುತ್ತಾರೆ. ಪುರುಷ ಪಾತ್ರಧಾರಿಗಳು ರಂಗದ ಮೇಲೆ ಬಂದಾಗ ಮುಮ್ಮೇಳದಲ್ಲಿರುವ ಪುರುಷ ಹಾಡಿನ ಒಂದು ಚರಣ ಹಾಡುತ್ತಿದಂತೆ ಹಿಮ್ಮೇಳದಲ್ಲಿರುವ ಕಲಾವಿದರ ಸಮೂಹ ಒಟ್ಟಿಗೆ ಸೇರಿ ಹಾಡಿಗೆ ಧ್ವನಿಗೂಡಿಸುತ್ತಾರೆ. ಹಾಗೆಯೇ ಹೆಣ್ಣಿನ ಪಾತ್ರಧಾರಿಗಳು ಬಂದಾಗ ಮುಮ್ಮೇಳದಲ್ಲಿರುವ ಹಾಡುಗಾರರು ಮೊದಲ ಚರಣ ಶುರುಮಾಡುತ್ತಿದ್ದಂತೆ ಹಿಮ್ಮೇಳದವರು ಹಾಡಿಗೆ ಧ್ವನಿ ನೀಡಿ ಜೋರಾಗಿ ಹಾಡುತ್ತಾರೆ. ಒಟ್ಟಾರೆ ಹಾಡನ್ನು ಒಂದು ಧಾಟಿ, ವಿನ್ಯಾಸ, ರಾಗಗಳೊಂದಿಗೆ ಸುಮಧುರವಾಗಿ ಹಾಡಿ ಸಹೃದಯರ ಮನಸಿಗೆ ಮುದ ನೀಡುತ್ತಾರೆ.

## ಸಾಸುಲು ಚಿನ್ನಮ್ಮ

ಈ ಕೇಳಿಕೆ ಒಂದು ಕುಟುಂಬ ಮತ್ತು ಒಂದು ಸಾಮಾಜಿಕ ವ್ಯವಸ್ಥೆಯು ಮಹಿಳೆಗೆ ಒಡ್ಡುವ ಸಮಸ್ಯೆಗಳನ್ನು ಕುರಿತು ಚಿತ್ರಿಸುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ದೈವದ ಮೂಲಕ ಹೇಳಿಸುವಂತಹ ಪ್ರಯತ್ನ ಇಲ್ಲಿ ಮಾಡಲಾಗಿದೆ. ಮನಸ್ಸಿದ್ದರೆ ಮಾರ್ಗ ಎನ್ನುವ ಹಾಗೆ ತಾನು ಎಲ್ಲಾ ಕಷ್ಟ ಗಳನ್ನೂ ಗೆದ್ದು ಜೀವನ ನಡೆಸಬಹುದು ಎಂಬ ಆತ್ಮವಿಶ್ವಾಸವನ್ನು ತುಂಬುವಂತಹ ವಿಶಿಷ್ಟವಾದ ಒಂದು ಕಥೆ ಇದಾಗಿದೆ. ಇದರ ಜೊತೆಗೆ ಈ ಕಥೆಯಲ್ಲಿ ಶೈವ ಮತ್ತು ವೈಷ್ಣವ ಪಂಥಗಳ ನಡುವಿನ ಸಂಘರ್ಷವೂ ಆ ಕಾಲದ ಧಾರ್ಮಿಕ ಸಂಘರ್ಷಗಳನ್ನು ಚಿತ್ರಿಸುತ್ತದೆ. ದೈವಗಳೂ ಇಲ್ಲಿ ಮನುಷ್ಯ ಸ್ವಭಾವಗಳನ್ನು ಹೊತ್ತಿರುವುದು ವಿಶೇಷ. ಈ ಕಥೆಯಲ್ಲಿ ಪಾತ್ರದ ನಾಯಕಿಯಾಗಿರುವ ಸಾಸುಲು ಚಿನ್ನಮ್ಮನ ಮೂಲಕ ವೈಷ್ಣವ ಪಂಥ ಇಲ್ಲಿ ಗೆಲುವು ಸಾಧಿಸುತ್ತದೆ. ಸಾಮಾನ್ಯವಾಗಿ ಒಂದು ರೈತ ಕುಟುಂಬದಲ್ಲಿ ನಡೆಯುವ ಸಮಸ್ಯೆಗಳನ್ನು ಸಾಸುಲು ಚಿನ್ನಮ್ಮನ ಜೀವನ ವೃತ್ತಾಂತಕ್ಕೆ ಅಳವಡಿಸಿ ಕೇಳಿಕೆ ಕಲಾವಿದರು ಒಂದು ರಂಗವೇದಿಕೆಯ

ಮೇಲೆ ತುಂಬಾ ಭಾವುಕರಾಗಿ ವ್ಯಕ್ತಪಡಿಸುತ್ತಾರೆ. ಹೆಣ್ಣಿನ ಸಂವೇದನೆಗಳು, ಸಮ್ಮಾನ–ದುಮ್ಮಾನಗಳು, ಮಾನವೀಯ ಘರ್ಷಣೆಗಳು, ವರ್ಗ, ವರ್ಣ ತಾರತಮ್ಯತೆಗಳು, ದೈವಪಂಥ ಗಳಲ್ಲಿಯ ಶ್ರೇಷ್ಠ–ಕನಿಷ್ಠತೆಗಳು ಮಾನವ ಸಹಜ ಸಂಕೀರ್ಣ ವ್ಯಕ್ತಿತ್ವಗಳಿಂದಾಗಿ ಆಕರ್ಷಕವಾಗಿದೆ. ಈ ಕೇಳಿಕೆ ಮನುಷ್ಯನ ಏಳು–ಬೀಳುಗಳ ಜೊತೆಗೆ ಅವನ ಸಹಜ ದೌರ್ಬಲ್ಯಗಳನ್ನೂ ಸ್ವೀಕರಿಸಿ ಕ್ಷಮಿಸುವಂತಾದ್ದು ಕಂಡುಬರುತ್ತದೆ.

## ಮುಗ್ಗುರು ಮರಾಠಿಲು

ಈ ಕೇಳಿಕೆಯ ಶೀರ್ಷಿಕೆ ತುಂಬಾ ದೇಶಿಯ ಪದಗಳಿಂದ ಕೂಡಿದ್ದು ತೆಲುಗು ಭಾಷೆಯಲ್ಲಿಯೇ ಪ್ರಚಾರದಲ್ಲಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶದ ಮೇಲೆ ಮರಾಠರು ಯುದ್ಧ ಮಾಡಿದ ನಂತರ ಮರಾಠಿ ಮನೆತನಗಳಲ್ಲಿ ನಡೆಯುವ ಕಥೆ ಇದಾಗಿದೆ. ಅಣ್ಣ ತಮ್ಮಂದಿರ ಮಧ್ಯೆ ಕೋಪ, ದ್ವೇಷ, ಅಸೂಯೆ, ಮತ್ಸರ ಗುಣಗಳು ಉಂಟಾದಾಗ ಆ ಮನೆತನ ಹೇಗೆ ದುರಂತದಲ್ಲಿ ಮುಳುಗುತ್ತದೆ ಎಂಬುದನ್ನು ಈ ಕೇಳಿಕೆ ಕಥೆಯಲ್ಲಿ ಚರ್ಚಿಸಲಾಗಿದೆ. ದೇವೇಂದ್ರನ ವರದಿಂದ ಒಬ್ಬ ಪಾಳೇಗಾರನಿಗೆ ಕುದುರೆ, ನಾಯಿ, ಈಟಿಗಳು ದೊರೆಯುತ್ತವೆ. ಇವುಗಳ ಸಹಾಯದಿಂದಲೇ ಪಾಳೇಗಾರರು ಯುದ್ಧದಲ್ಲಿ ಗೆಲ್ಲುವುದು. ಕುದುರೆಗಳೆಂದರೆ ಅವು ಕುದುರೆಗಳಲ್ಲ ರೆಕ್ಕೆಗಳನ್ನು ಪಡೆದು ಆಕಾಶದಲ್ಲಿ ಹಾರುವ ದೇವೇಂದ್ರನ ಐರಾವತಗಳು. ನಾಯಿಗಳೆಂದರೆ ನಾಯಿಗಳಲ್ಲ ಅವು ಪ್ರಾಣಾಂತಕ ಸಿಂಹಗಳು. ಈಟಿಗಳೆಂದರೆ ಈಟಿಗಳಲ್ಲ ವಿಷಪೂರಿತ ನಾಗ ಸರ್ಪಗಳು. ಹೀಗೆ ರಂಜಕ ವಿಷಯಗಳನ್ನು ಇಟ್ಟುಕೊಂಡು ರಂಗಮಂಟಪದ ಮೇಲೆ ಭಾವಾಭಿನಯದಿಂದ ಕಲಾವಿದರು ವಿಜೃಂಭಿಸುತ್ತಾರೆ.

ಹೀಗೆ ಕೇಳಿಕೆ ಕಲಾಪ್ರಕಾರವನ್ನು ಮತ್ತು ಇಲ್ಲಿ ಕಂಡುಬರುವ ಕಥೆಗಳನ್ನು ಕೂಲಂಕಷವಾಗಿ ಗ್ರಹಿಸಿದಾಗ ದೇಶಿ ರಂಗ ಪ್ರಕಾರವಾದ ಕೇಳಿಕೆ ಕಲೆಯು ಪರಂಪರೆಯ ಅಭಿವ್ಯಕ್ತಿಯಾಗಿ ಬೆಳೆದು ಬಂದಿದೆ. ಕೇಳಿಕೆಯು ಜನಪದ ಸಂಸ್ಕೃತಿಯಲ್ಲಿ ಬಹಳ ಪ್ರಸಿದ್ಧಗೊಂಡು, ಬಾಯಿಂದ ಬಾಯಿಗೆ ರವಾನೆಗೊಂಡು, ಮೌಖಿಕ ಕಥಾ ಪರಂಪರೆಯಲ್ಲಿ ಇದ್ದಂತಹ ಕಥೆಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು, ರಂಗಭೂಮಿಯ ಮೇಲೆ ಪ್ರದರ್ಶನ ಮಾಡುವ ಸಾಹಸಕ್ಕೆ ಮುಂದಾಗುವ ವಿಶಿಷ್ಟ ಕಲೆಯಾಗಿದೆ. ಇದರಲ್ಲಿ ಮದ್ದಳೆ ತಾಳ ಮತ್ತು ಮುಖವೀಣೆಗಳಿರುತ್ತವೆ. ಇದು ಜನಪದ ಸಂಪ್ರದಾಯಗಳ ಆಧಾರದ ಮೇಲೆ ಬೆಳೆದು ಬಂದ ಆಚರಣಾ

ಕಲೆಯಾಗಿದೆ. ಮೂಡಲಪಾಯ ಯಕ್ಷಗಾನದ ಲಕ್ಷಣಗಳನ್ನು ಹೋಲುವಂತಹ ವಿನ್ಯಾಸದಿಂದ ಕೇಳಿಕೆ ಕಲೆ ಸಿದ್ಧಗೊಂಡಿದೆ. ಕರ್ನಾಟಕಾಂಧ್ರ ಪ್ರದೇಶದಲ್ಲಿ ಬೆಳವಣಿಗೆಯಾಗಿರುವ ವೃತ್ತಿ ಗಾಯಕ ಸಂಸ್ಕೃತಿ ಮತ್ತು ಆಂಧ್ರರಾಜ್ಯದಲ್ಲಿ ಹಲವು ವರ್ಷಗಳಿಂದ ಸಾಗಿಬಂದಿರುವ 'ವೀಧಿನಾಟಕಂ' ಅಂದರೆ 'ಬೀದಿನಾಟಕದ' ಬಹು ಅಂಶಗಳು ಸೇರಿ ಈ ವಿಶಿಷ್ಟ ಪ್ರಕಾರ ಸಿದ್ಧವಾಗಿದೆ. ಕೇಳಿಕೆಯ ನೃತ್ಯ, ಲಾಸ್ಯ, ವೇಷಭೂಷಣಗಳ ಮೇಲೆ ಪ್ರಭಾವ ಬೀರಿದೆ. ಇದರ ಜೊತೆಗೆ ಈ ಪ್ರದೇಶದಲ್ಲಿ ಪ್ರಚಲಿತಗೊಂಡಿದ್ದ ಬುರ್ರಕಥಾ ಕಥನ ಸಂಪ್ರದಾಯದ ಹಾಡಿನ ಲಾಸ್ಯಗಳು ಮತ್ತು ಸಂಗೀತದ ಬಹು ಮಾದರಿಗಳು ಕೇಳಿಕೆ ಕಲೆಯು ಬೆಳವಣಿಗೆ ಆಗಲು ಸಹಕರಿಸಿವೆ. ಇದು ಪ್ರಚಲಿತಗೊಂಡು ಸುಗಮವಾಗಿ ಸಾಗಲು ಗಡಿಭಾಗದಲ್ಲಿ ಕಾಣಿಸಿಕೊಳ್ಳುವ ಹಗಲು ವೇಷಗಾರರ ಕಥೆಗಳ ಸ್ವರೂಪಗಳು ಕಾರಣವಾಗಿವೆ. ಬುಡಕಟ್ಟು ಪರಂಪರೆಯ ಅಲೆಮಾರಿ ಜನಪದರು ಮತ್ತು ಕೃಷಿ ಮೂಲದ ಜನಪದರುಗಳಿಂದ ಕೇಳಿಕೆ ಜನಪದ ಕಥನಕಲೆ ನಿರಂತರವಾಗಿ ಸಮೃದ್ಧಿಗೊಳ್ಳುತ್ತಾ ಬಂದಿದೆ. ಅಂದಿನ ಕಾಲದಲ್ಲಿ ಬಯಲಾಟದ ಹಲವಾರು ಪ್ರಕಾರಗಳು ಗ್ರಾಮೀಣ ಜನರಿಗೆ ಹವ್ಯಾಸಿ ತಾಣಗಳಾಗಿ ಮಾರ್ಪಾಡಾಗಿದ್ದವು. ಕೇಳಿಕೆ ಕಲೆಯು ಕೋಲಾರ ಜಿಲ್ಲೆಯ ಜನರ ಸಾಂಸ್ಕೃತಿಕ ಜೀವನಕ್ಕೆ ಒಂದು ಮೈಲುಗಲ್ಲಾಗಿದೆ. ಕೇಳಿಕೆಗಳು ಸಮಾಜಕ್ಕೆ ನೈತಿಕತೆ, ಮಾನವೀಯ ಮೌಲ್ಯಗಳನ್ನು ತಿಳಿಸುವ ಒಂದು ರಂಗ ಪ್ರಕಾರವಾಗಿವೆ. ಆದರೆ ಆಧುನಿಕ ಕಾಲದಲ್ಲಿ ಜಾಗತೀಕರಣದ ಪ್ರಭಾವದಿಂದ ದೇಶೀ ಸಂಸ್ಕೃತಿ ನಾಶಗೊಳ್ಳುತ್ತಿದೆ. ಪ್ರಸ್ತುತ ಸಾಮಾಜಿಕ ಜಾಲತಾಣ ಮಾಧ್ಯಮಗಳ ಬಳಕೆ ಪ್ರಮಾಣ ಹೆಚ್ಚಾಗಿರುವುದರಿಂದ ಇಂದು ಇಂತಹ ಪೌರಾಣಿಕ ನಾಟಕಗಳು ಕಟ್ಟಿಕೊಡುವ ದೇಶಿಸಂಸ್ಕೃತಿಯ ಸಾಂಪ್ರದಾಯಿಕ ಕಲೆಯ ಕಡೆಗೆ ಪ್ರೇಕ್ಷಕರಿಗೆ ಒಲವಿಲ್ಲವಾಗಿರುವುದು ವಿಶಾದನೀಯ.

## ಪರಾಮರ್ಶನ ಗ್ರಂಥಗಳು


1. ಚಿದಾನಂದಮೂರ್ತಿ ಎಂ; ಸಂಶೋಧನಾ ತರಂಗ (ಸಂ.2); ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ; 1970
2. ನಾರಾಯಣಸ್ವಾಮಿ ವೇಮಗಲ್.ಡಿ; ಕೇಳಿಕೆ ಒಂದು ಅಧ್ಯಯನ; ಸಿ.ವಿ.ಜಿ ಪ್ರಕಾಶನ, ಬೆಂಗಳೂರು; 2005
3. ಶಿವರುದ್ರಪ್ಪ ಜಿ.ಎಸ್(ಸಂ); ಸಾಧನೆ; ಬೆಂಗಳೂರು ವಿಶ್ವವಿದ್ಯಾಲಯ; 1983.